# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಮಿಸಲೆನಿಯಸ್ ನಂ.50/2019

**ಆರ್.ಡಬ್ಲ್ಯೂ :1**

**ದಿನಾಂಕಃ 11-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಎಂ.ಬಿ.ಎನ್. ವಕೀಲರಿಂದಃ-**

ಮುಂದುವರಿದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ಮತ್ತು 5 ನೇ ಎದುರುದಾರರ ಪರವಾಗಿ ಶ್ರೀಮತಿ ಪಿ.ಕೆ.ಟಿ. ವಕೀಲರಿಂದಃ-**

1. ನಮ್ಮ ಕುಟುಂಬದಲ್ಲಿ ಮಂಗಲ ಯಾನೆ ಪದ್ಮಾವತಿ, ಶ್ಯಾಮಲಾ ಯಾನೆ ದಿವ್ಯಾ ಗಣೇಶ ನಾಯ್ಕ, ಸೈರೋಬಾ ವಿಠಲ ನಾಯ್ಕ, ಪ್ರಭಾವತಿ ಪ್ರಭಾಕರ ನಾಯ್ಕ, ಕಲ್ಪನಾ ಚಂದ್ರಕಾಂತ ನಾಯ್ಕ, ಸುಗಂಧಾ ಸುರೇಶ ನಾಯ್ಕ, ಸೂರಜ್ ಉಮೇಶ ನಾಯ್ಕ, ಸಂಗೀತಾ ಉಮೇಶ ನಾಯ್ಕ ಮತ್ತು ಕೃಷ್ಣಾನಂದ ವಿಠಲ ನಾಯ್ಕ ಎಂಬುವವರು ಇರುತ್ತಾರೆ. ನಾನು ಈ ದಿನ ನ್ಯಾಯಾಲಯದಲ್ಲಿ ನಮ್ಮ ಕುಟುಂಬದ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನಮ್ಮ ಕುಟುಂಬದವರು ನನಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಜಿ.ಪಿ.ಎ. ನೀಡಿರುತ್ತಾರೆ. ಸದರಿ ಜಿ.ಪಿ.ಎ. ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಗುಣ ನನಗೆ ಅಜ್ಜನಾಗಬೇಕು. ನನ್ನ ಅಜ್ಜನಿಗೆ ಒಟ್ಟು ನಾಲ್ಕು ಜನರು ಮಕ್ಕಳು. ಅಂದರೆ, ಬುಧಿಯಾ ನಾಯ್ಕ, ಟಾಕ್ಯಾ ನಾಯ್ಕ, ವಿಠಲ ನಾಯ್ಕ ಮತ್ತು ಪಾಂಡುರಂಗ ನಾಯ್ಕ. ಬುಧಿಯಾ ನಾಯ್ಕ ರವರು ಮಿಲಿಟ್ರಿ ಸೇವೆಯಲ್ಲಿದ್ದನು. ಟಾಕ್ಯಾ ನಾಯ್ಕ ವ್ಯಾಪಾರ ಮಾಡುತ್ತಿದ್ದನು, ವಿಠಲ ನಾಯ್ಕ ರವರು ಗದ್ದೆ ಕೆಲಸ ಮತ್ತು ಮೀನುಗಾರಿಕೆ ಮಾಡುತ್ತಿದ್ದನು, ಪಾಂಡುರಂಗ ನಾಯ್ಕ ರವರು 1974 ರ ಮೊದಲು ಮನೆ ಕಟ್ಟುವ ಮೇಸ್ತ್ರಿ ಕೆಲಸಕ್ಕೆ ಹೋಗುತ್ತಿದ್ದನು.

2. ಸರ್ವೆ ನಂ.264 ಅ/1, 264 ಅ/4, 246/ಸಿ ರ ಜಮೀನುಗಳು ಬುಧಿಯಾ ನಾಯ್ಕ ಹಾಗೂ ಪಾಂಡುರಂಗ ನಾಯ್ಕ ರವರು ಸಲ್ಲಿಸಿದ ಅರ್ಜಿಯ ಮೇರೆಗೆ, ಭೂ ನ್ಯಾಯ ಮಂಡಳಿಯ ಆದೇಶ ಸಂಖ್ಯೆ: 8908+5709+3290 ದಿಃ 03-07-1980 ರಂತೆ ನಮ್ಮ ಕುಟುಂಬಕ್ಕೆ ಬಂದಂತಹ ಜಮೀನುಗಳಾಗಿರುತ್ತವೆ ಎಂದರೆ ಸರಿ. ಆ ನಂತರ ನಾನು ಕಾರವಾರದ ಸಿವಿಲ್ ನ್ಯಾಯಾಲಯದಲ್ಲಿ ¼ ಅಂಶ ಭಾಗ ಕೋರಿ, ಮೂಲ ದಾವಾ ನಂಃ 02/1999 ನ್ನು ಸಲ್ಲಿಸಿದ್ದೆ ಎಂದರೆ ಸರಿ.

3. ಆ ನಂತರ ಪಾಂಡುರಂಗ ನಾಯ್ಕ ರವರು ಸರ್ವೆ ನಂಃ 533/2, 269 ಅ/6, 269 ಅ/10 ರ ಜಮೀನುಗಳಿಗೆ ಸಂಬಂಧಿಸಿದಂತೆ ಭೂ ನ್ಯಾಯ ಮಂಡಳಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿದ್ದು, ಭೂ ನ್ಯಾಯ ಮಂಡಳಿಯು ದಿಃ 27-04-1977 ರಂದು ಪಾಂಡುರಂಗ ನಾಯ್ಕ ರವರಿಗೆ ಮಾತ್ರ ಆದೇಶ ಆಗಿರುತ್ತದೆ ಎಂದರೆ ಸರಿ. ನಾನು ಹಾಕಿದ ದಾವೆಯಲ್ಲಿ ಸರ್ವೆ ನಂಃ 533/2, 269 ಅ/6, 269 ಅ/10 ಗಳು ಸೇರಿರುತ್ತವೆ ಎಂದು ಪಾಂಡುರಂಗ ನಾಯ್ಕ ರವರು ಸದರಿ ದಾವೆಯ ವಿರುದ್ಧ ಆರ್.ಎ ನಂಃ 26/2008 ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆರ್.ಎ ನಂಃ 26/2008 ರ ಡಿಕ್ರಿ ಹಾಗೂ ತೀರ್ಪನ್ನು ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಭೂ ನ್ಯಾಯ ಮಂಡಳಿಯ ಆದೇಶವನ್ನು ಸದರಿ ಆರ್.ಎ ನಂಃ 26/2008 ರಲ್ಲಿ ಹಾಜರುಪಡಿಸಲಾಗದ ಕಾರಣ, ಪಾಂಡುರಂಗ ನಾಯ್ಕನ ವಾರಸುದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ ನಂಃ 100587/2018 ನ್ನು ಸಲ್ಲಿಸಿದ್ದು ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆರ್.ಎಸ್.ಎ ನಂಃ 100587/2018 ಪ್ರಕರಣದಲ್ಲಿ ನಾನು ಹಾಜರಾಗಿರುವುದಿಲ್ಲ ಹಾಗೂ ನಾನು ವಕೀಲರಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

4. ಸರ್ವೆ ನಂಃ 533/2, 269 ಅ/6, 269 ಅ/10 ರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ ಗಳ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ಬಂದಿರುವುದಿಲ್ಲ. ಬುಧಿಯಾ ನಾಯ್ಕ ರವರ ಮಗ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಕಾಲಾವಕಾಶವನ್ನು ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ